# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ವಿಆ(ಘ.ತ್ಯಾ.ನಿ)/ಪಿಆರ್/51/2015-16

ವಿಶೇಷ ಆಯುಕ್ತರು (ಘ.ತ್ಯಾ.ನಿ/ಆ)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು, ದಿನಾಂಕ:05.02.2016.

## :: ಸುತ್ತೋಲೆ – 10 ::

ವಿಷಯಃ ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ಸಾಗಾಣಿಕೆ ಕಾರ್ಯದಲ್ಲಿ ಶುಚಿಮಿತ್ರ ರವರುಗಳನ್ನು ಸಮರ್ಪಕವಾಗಿ ತೊಡಗಿಸಿಕೊಳ್ಳುವ ಬಗ್ಗೆ.

*****

ಮೇಲಿನ ವಿಷಯದತ್ತ ಗಮನಹರಿಸಲು ಕೋರುತ್ತಾ, ಬೆಂಗಳೂರು ನಗರವು ಕರ್ನಾಟಕದ ಒಂದು ಸ್ವಚ್ಛ ಹಾಗೂ ಸುಂದರ ಉದ್ಯಾನವನ ನಗರವಾಗಿದ್ದು, ಬೆಂಗಳೂರು ನಗರವನ್ನು ಸುಂದರವಾಗಿ ಮತ್ತು ಸ್ವಚ್ಛವಾಗಿಡಲು ಸಾರ್ವಜನಿಕರ ಪಾತ್ರ ಬಹು ಮುಖ್ಯವಾಗಿರುತ್ತದೆ. ಅದರಲ್ಲೂ ಘನ ತ್ಯಾಜ್ಯ ನಿರ್ವಹಣೆ ಮತ್ತು ಸಾಗಾಣಿಕೆ ಕಾರ್ಯದಲ್ಲಿ ಶುಚಿಮಿತ್ರ ರವರುಗಳನ್ನು ತೊಡಗಿಸಿಕೊಳ್ಳುವಿಕೆ ಪ್ರಮುಖವಾಗಿರುತ್ತದೆ. ಹಾಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜೊತೆಯಲ್ಲಿ ಕೈಕೂಡಿಸಿದರೆ ನಗರವನ್ನು ಸ್ವಚ್ಛವಾಗಿಡಲು ಅನುಕೂಲವಾಗುತ್ತದೆ. ಸದರಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಶುಚಿಮಿತ್ರ ರವರುಗಳ ಕಾರ್ಯವ್ಯಾಪ್ತಿ ಈ ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

- ಪ್ರತಿ ದಿನ ಬೆಳಿಗ್ಗೆ ಮಸ್ಟರಿಂಗ್ ಪಾಯಿಂಟ್‌ನಲ್ಲಿ ಪೌರ ಕಾರ್ಮಿಕ ಮತ್ತು ವಾಹನಗಳ ಹಾಜರಾತಿ ಪಡೆದುಕೊಳ್ಳುವುದು. ಗುತ್ತಿಗೆ ಕರಾರಿನಂತೆ ಅಗತ್ಯವಿರುವ ಪೌರ ಕಾರ್ಮಿಕ ಮತ್ತು ವಾಹನಗಳನ್ನು ಗುತ್ತಿಗೆದಾರರು ನೀಡಿಲ್ಲವಾದ್ದಲ್ಲಿ ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರಿಗೆ ವರದಿ ನೀಡುವುದು.
- ಎರಡನೇ ಹಂತದ (Secondary point) ಮತ್ತು ಕಪ್ಪು ಚುಕ್ಕಿ (ಬ್ಲಾಕ್ ಸ್ಪಾಟ್) ಸ್ಥಳಗಳಲ್ಲಿ (ಲಾರಿ/ಕಾಂಪ್ಯಾಕ್ಟರ್ ಪಾಯಿಂಟ್) ಘನತ್ಯಾಜ್ಯ ವಸ್ತುಗಳನ್ನು ತೆರವುಗೊಳಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಮನೆ ಮನೆಗಳಿಂದ ಕಸ ಸಂಗ್ರಹಣೆ ಮಾಡಲು ನಿಯೋಜಿಸಲಾಗಿರುವ ತಳ್ಳುವಗಾಡಿಗಳು/ ಆಟೋಟಿಪ್ಪರ್‌ಗಳು ಆಯಾ ನಿಗಧಿತ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಕುರಿತು ಪರಿಶೀಲನೆ ಮಾಡುವುದು.
- ಸಾರ್ವಜನಿಕರ ಹಿತಾಸಕ್ತಿ ದೃಷ್ಟಿಯಿಂದ ಆಟೋಟಿಪ್ಪರ್/ತಳ್ಳುವಗಾಡಿಗಳ ಮೇಲೆ ನಿಗಧಿಪಡಿಸಿರುವ ಸ್ಥಳದ ಹೆಸರನ್ನು ನಮೂದಿಸಿರುವ ಬಗ್ಗೆ ಪರಿಶೀಲಿಸುವುದು.
- ಪ್ರತಿ ದಿನ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ವಾಹನಗಳ ಮೂಲಕ ಘನತ್ಯಾಜ್ಯ ವಸ್ತುಗಳನ್ನು ಸಾಗಿಸಿರುವ ಬಗ್ಗೆ ಮಾಹಿತಿ ಪಡೆಯುವುದು.
- ವಾಹನಗಳು ಸ್ಥಿತಿಯಲ್ಲಿ ಇರುವ ಬಗ್ಗೆ ಆಗಿಂದ್ದಾಗ್ಗೆ ಪರಿವೀಕ್ಷಣೆ ನಡೆಸುವುದು.
- ಒಣ ತ್ಯಾಜ್ಯ ಸಂಗ್ರಹಣಾ ಘಟಕಕ್ಕೆ (DWCC) ಆಗಿಂದ್ದಾಗ್ಗೆ ಭೇಟಿ ನೀಡಿ ಸ್ವಚ್ಛತೆ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು. ಅಗತ್ಯಬಿದ್ದರೆ ಮೇಲಾಧಿಕಾರಿಗಳಿಗೆ ದೂರವಾಣಿ ಮೂಲಕ ಮಾತನಾಡುವುದು.
- ಸಂಸ್ಕರಣಾ ಘಟಕಗಳಲ್ಲಿ ಆಗುವ ಕಾರ್ಯಗಳನ್ನು ಮೇಲುಸ್ತುವಾರಿ ಮಾಡುವುದು.

- ಘನತ್ಯಾಜ್ಯ ವಸ್ತುಗಳನ್ನು ಹಸಿಕಸ, ಒಣಕಸ ಹಾಗೂ ಸ್ಯಾನಿಟರಿ ಕಸಗಳಾಗಿ ವಿಂಗಡನೆ ಮಾಡಲು ಸಾರ್ವಜನಿಕರಲ್ಲಿ ಅರಿವು ಮಾಡಿಸುವುದು ಹಾಗೂ ಅಗತ್ಯ ಬಿದ್ದಲ್ಲಿ ಜನಪ್ರತಿನಿಧಿಗಳ ನೆರವು ಪಡೆಯುವುದು.
- ಗುತ್ತಿಗೆದಾರರಿಗೆ ಮಾಸಿಕ ಬಿಲ್ಲನ್ನು ಪಾವತಿ ಮಾಡುವ ಸಂಬಂಧ ಸದರಿ ಗುತ್ತಿಗೆದಾರರು ಸಮರ್ಪಕವಾಗಿ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಕಾರ್ಯ ನಿರ್ವಹಿಸಿರುವ ಬಗ್ಗೆ ಶುಚಿಮಿತ್ರ ರವರಿಂದ ಪತ್ರದ ಮೂಲಕ ಪ್ರಮಾಣ ಪತ್ರ (Check list) ಪಡೆಯುವುದು. ಸದರಿ ಪತ್ರದೊಂದಿಗೆ Check list ಲಗತ್ತಿಸಿದೆ.
- ಒಟ್ಟಿನಲ್ಲಿ ವಾರ್ಡ್‌ನ ಸ್ವಚ್ಛತೆ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುವುದು ಮತ್ತು ಒತ್ತು ನೀಡುವುದು.

ಮೇಲಿನ ಎಲ್ಲಾ ಕಾರ್ಯಗಳಿಗೆ ಪ್ರತಿ ವಾರ್ಡಿನಲ್ಲಿ ಕನಿಷ್ಠ ನಾಲ್ಕು ಶುಚಿಮಿತ್ರರವರನ್ನು ಕಡ್ಡಾವಾಗಿ ಗುರುತಿಸಿ ವಿಶೇಷ ಆಯುಕ್ತರು (ಘ.ತ್ಯಾ.ನಿ.) ರವರ ಕಛೇರಿಗೆ ಪಟ್ಟಿ ಸಲ್ಲಿಸುವುದು ಹಾಗೂ ಪಾಲಿಕೆ ವತಿಯಿಂದ ಅಗತ್ಯವಾದ ಸೌಲಭ್ಯವನ್ನು, ಬೆಂಬಲವನ್ನು ಹಾಗೂ ಆಯಾ ವಾರ್ಡಿನಲ್ಲಿ ಇರುವ ಶುಚಿಮಿತ್ರ ರವರಿಗಳಿಗೆ ಮೇಲೆ ಪಟ್ಟಿ ಮಾಡಿರುವ ವಿಷಯದ ಬಗ್ಗೆ ತಿಳಿಸಿಕೊಡಲು ಸೂಚಿಸುತ್ತಾ, ಈ ಮೇಲಿನ ಸದರಿ ಕಾರ್ಯದಲ್ಲಿ ಶುಚಿಮಿತ್ರಗಳನ್ನು ಸಮರ್ಪಕವಾಗಿ ತೊಡಗಿಸಿಕೊಳ್ಳಲು ಈ ಮೂಲಕ ಸೂಚಿಸಿದೆ.

5.2.16

ವಿಶೇಷ ಆಯುಕ್ತರು (ಘ.ತ್ಯಾ.ನಿ)
ಬಿಬಿಎಂಪಿ

<u>ಪ್ರತಿಯನ್ನು</u>

1. ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಉಪ ಮಹಾಪೌರರು ಆಧ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿ ರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ವಿಶೇಷ ಆಯುಕ್ತರು (ಯೋಜನೆ), (ಹಣಕಾಸು) ರವರ ಗಮನಕ್ಕೆ ಸಲ್ಲಿಸಿದೆ.
6. ಜಂಟಿ ಆಯುಕ್ತರು (ಆರೋಗ್ಯ ಮತ್ತು ಘ.ತ್ಯಾ.ನಿ.) ರವರ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
7. ಪ್ರಧಾನ ಅಭಿಯಂತರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
8. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ರವರಿಗೆ ಕಳುಹಿಸುತ್ತಾ ಮೇಲೆ ತಿಳಿಸಿರುವಂತೆ ಶುಚಿಮಿತ್ರ ರವರಿಗಳಿಗೆ ಪತ್ರ ಮೂಲಕ ತಿಳಿಸಲು ಸೂಚಿಸಿದೆ.
9. ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳಿಗೆ ಕಳುಹಿಸುತ್ತಾ ಮೇಲೆ ತಿಳಿಸಿರುವಂತೆ ಶುಚಿಮಿತ್ರ ರವರಿಗಳಿಗೆ ಪತ್ರ ಮೂಲಕ ತಿಳಿಸಲು ಸೂಚಿಸಿದೆ.
10. ಎಲ್ಲಾ ವಲಯದ ಅಧೀಕ್ಷಕ ಅಭಿಯಂತರರುಗಳಿಗೆ ಕಳುಹಿಸುತ್ತಾ ಮೇಲೆ ತಿಳಿಸಿರುವಂತೆ ಶುಚಿಮಿತ್ರ ರವರಿಗಳಿಗೆ ಪತ್ರ ಮೂಲಕ ತಿಳಿಸಲು ಸೂಚಿಸಿದೆ.
11. ಕಛೇರಿ ಕಡತಕ್ಕೆ.

# ಗುತ್ತಿಗೆದಾರರಿಗೆ ಹಣ ಪಾವತಿಸುವಾಗ ಶುಚಿಮಿತ್ರರವರಿಂದ ಕಡ್ಡಾಯವಾಗಿ ಪಡೆಯಬೇಕಾಗಿರುವ Check list

- ಪ್ರತಿ ದಿನ ಬೆಳಿಗ್ಗೆ ಮಸ್ಟರಿಂಗ್ ಪಾಯಿಂಟ್‌ನಲ್ಲಿ ಗುತ್ತಿಗೆ ಕರಾರಿನಂತೆ ಅಗತ್ಯವಿರುವ ಪೌರ ಕಾರ್ಮಿಕ ಮತ್ತು ವಾಹನಗಳನ್ನು ಗುತ್ತಿಗೆದಾರರು ನೀಡಿರುತ್ತಾರೆ.
- ಪ್ರತಿ ದಿನ ಎರಡನೇ ಹಂತದ (Secondary point) ಮತ್ತು ಕಪ್ಪು ಚುಕ್ಕಿ (ಬ್ಲಾಕ್ ಸ್ಪಾಟ್) ಸ್ಥಳಗಳಲ್ಲಿ (ಲಾರಿ/ಕಾಂಪ್ಯಾಕ್ಟರ್ ಪಾಯಿಂಟ್) ಘನತ್ಯಾಜ್ಯ ವಸ್ತುಗಳನ್ನು ತೆರವುಗೊಳಿಸಿರುತ್ತಾರೆ.
- ಮನೆ ಮನೆಗಳಿಂದ ಕಸ ಸಂಗ್ರಹಣೆ ಮಾಡಲು ನಿಯೋಜಿಸಲಾಗಿರುವ ತಳ್ಳುವಗಾಡಿಗಳು/ ಆಟೋಟಿಪ್ಪರ್‌ಗಳು ಪ್ರತಿ ದಿನ ಆಯಾ ನಿಗಧಿತ ಸ್ಥಳದಲ್ಲಿ ಕಾರ್ಯನಿರ್ವಹಿಸಿರುತ್ತವೆ ಹಾಗೂ ಪ್ರತಿ ದಿನ ಸಮರ್ಪಕವಾಗಿ ಕಾರ್ಯನಿರ್ವಹಿಸಿರುತ್ತಾರೆ.
- ಪ್ರತಿ ದಿನ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ವಾಹನಗಳ ಮೂಲಕ ಘನತ್ಯಾಜ್ಯ ವಸ್ತುಗಳನ್ನು ಸಾಗಿಸಿರುತ್ತಾರೆ.
- ತಳ್ಳುವಗಾಡಿಗಳು ಮತ್ತು ವಾಹನಗಳು ಸುಸ್ಥಿತಿಯಲ್ಲಿ ಇರುತ್ತವೆ.
- ಪ್ರತಿ ದಿನ ಒಣ ತ್ಯಾಜ್ಯ ಸಂಗ್ರಹಣಾ ಘಟಕಕ್ಕೆ (DWCC) ಗುತ್ತಿಗೆದಾರರು ಒಣತ್ಯಾಜ್ಯವನ್ನು ನೀಡಿರುತ್ತಾರೆ.
- ಘನತ್ಯಾಜ್ಯ ವಸ್ತುಗಳನ್ನು ಹಸಿಕಸ, ಒಣಕಸ ಹಾಗೂ ಸ್ಯಾನಿಟರಿ ಕಸಗಳಾಗಿ ಸಾರ್ವಜನಿಕರು ವಿಂಗಡನೆ ಮಾಡಿ ನೀಡುತ್ತಿರುತ್ತಾರೆ.

**ಶಿಫಾರಸ್ಸು: ____________ ತಿಂಗಳಲ್ಲಿ ಗುತ್ತಿಗೆದಾರರಾದ __________ ರವರು ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮತ್ತು ಸಾಗಾಣಿಕೆ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿರುತ್ತಾರೆ/ನಿರ್ವಹಿಸಿರುವುದಿಲ್ಲ.**

ದಿನಾಂಕ:

ಶುಚಿಮಿತ್ರ ಹೆಸರು:

ಶುಚಿಮಿತ್ರ ಸಹಿ: